



# ಅಜ್ಜಿಮನೆ

## ಜ್ಞಾಪಕ ಚಿತ್ರಶಾಲೆ

**ಬಾಲ್ಯಕ್ಕೆ ಬಣ್ಣ ತುಂಬುತ್ತಿದ್ದ ‘ಅಜ್ಜಿಮನೆ’ ಎಂಬ ಸುಂದರ ಚಿತ್ರ ಈಗ ಮಸುಕಾಗಿದೆ. ಆಧುನಿಕ ಕಾಲದ ಬೇಸಿಗೆ ಶಿಬಿರಗಳಲ್ಲಿ ಖುಷಿ ಹುಡುಕುತ್ತಿರುವ ಪುಟಾಣಿಗಳ ನೆನಪಿನಲ್ಲಿ ‘ಅಜ್ಜಿಮನೆ’ ಎಂಬ ಪುಟ ಖಾಲಿ ಉಳಿದಿದೆ.**

■ ಸುರೇಂದ್ರ ಪೈ

ಪರೀಕ್ಷೆಗಳು ಮುಗಿದು ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾಗಿ ವಾರಗಳೇ ಕಳೆದುಹೋಗಿವೆ. ರಜೆಯ ಸವಿಯನ್ನು ಸವಿಯಲು ಹಲವು ದಾರಿಗಳನ್ನೂ ಮಕ್ಕಳು ಅನ್ವೇಷಿಸಿಕೊಳ್ಳುತ್ತಿದ್ದಾರೆ. ಆದರೆ ರಜೆಯಲ್ಲಿ ಮಕ್ಕಳನ್ನು ಮನೆಯಲ್ಲಿ ಸಂಭಾಳಿಸುವುದು ಪಾಲಕರಿಗೆ ಅಷ್ಟು ಸುಲಭದ ಕೆಲಸವಲ್ಲ. ಪಾಲಕರ ಈ ಚಿಂತೆಯನ್ನು ಕಳೆದ ಐದಾರು ವರ್ಷಗಳಿಂದೀಚೆಗೆ ಸ್ವಲ್ಪಮಟ್ಟಿಗೆ ದೂರ ಮಾಡಿರುವುದು ಬೇಸಿಗೆ ಶಿಬಿರಗಳು.

20ರಿಂದ 25 ದಿನಗಳ ಕಾಲ ನಡೆಯುವ ಇಂತಹ ಕೆಲವು ಬೇಸಿಗೆ ಶಿಬಿರಗಳು ಅರ್ಥಪೂರ್ಣವೂ ಆಗಿರುತ್ತವೆ. ಪಠ್ಯವಿಷಯದ ಹೊರತಾಗಿಯೂ ವಿನೋದದ ಕ್ರೀಡೆಗಳು, ನಾಟಕ, ಈಜು, ಚಿತ್ರಕಲೆ, ಕಾಡು (ವನ) ಸಂಚಾರದಂತಹ ಹಲವು ವೈವಿಧ್ಯಮಯ ಚಟುವಟಿಕೆಗಳನ್ನು ಕೈಗೊಳ್ಳುತ್ತವೆ. ಆದರೆ ಇನ್ನುಳಿದ ಬಹಳಷ್ಟು ಬೇಸಿಗೆ ಶಿಬಿರಗಳು ಮಕ್ಕಳಿಗೆ ಮುಂದುವರಿದ ಶೈಕ್ಷಣಿಕ ತರಗತಿಗಳಾಗಿರುತ್ತವೆಯೇ ವಿನಃ ಮಕ್ಕಳಿಗೆ ಹೊಸತೊಂದನ್ನು ಕಲಿಯಲು ಯಾವ ಅವಕಾಶವನ್ನೂ ನೀಡುವುದಿಲ್ಲ.

ಇದಿಷ್ಟು ಆಧುನಿಕ ಮಕ್ಕಳ ಬೇಸಿಗೆಯ ಶಿಬಿರದ ಮಾತು. ಆದರೆ ನಾವು ಕಳೆದ ಬೇಸಿಗೆ ಶಿಬಿರದ ಸೊಗಸೇ ಬೇರೆ. ಬದುಕೆಂಬ ಸುಂದರ ಪಯಣದಲ್ಲಿ ಎಲ್ಲರಿಗೂ ಮತ್ತೊಮ್ಮೆ ಮಗದೊಮ್ಮೆ ಹಿಂದಿರುಗಿ ಪಡೆಯಬೇಕೆನಿಸುವ ಜೀವನದ ಒಂದು ಹಂತ ಬಾಲ್ಯ. ಅಂತಹ ಬಾಲ್ಯದ ನೂರಾರು ನೆನಪಿನ ಪುಟದಲ್ಲಿ ಎಂದೆಂದಿಗೂ ಅಚ್ಚಳಿಯದೇ ಉಳಿದುಬಿಡುವ ಪುಟವೇ ‘ಅಜ್ಜಿಮನೆ’. ಬಾಲ್ಯದ ರಜಾ ದಿನಗಳನ್ನು ಕಳೆದ ಅಜ್ಜಿಮನೆಯೆಂಬ ಜ್ಞಾಪಕ ಚಿತ್ರಶಾಲೆಯ ಪ್ರತಿ ಪುಟವೂ ಮನಸ್ಸಿಗೆ ಮುದ ನೀಡುತ್ತದೆ. ಅದರಲ್ಲೂ ಇಂದಿನ ಆಧುನಿಕ ಜಗತ್ತಿನಲ್ಲಿ ಬುಡಮೇಲಾಗಿರುವ ಕೌಟುಂಬಿಕ ವ್ಯವಸ್ಥೆ ಹಾಗೂ ಅನುಕ್ಷಣವೂ ತಂತ್ರಜ್ಞಾನದ ದಾಸರಾಗಿ ಬದುಕು ಸಾಗಿಸುತ್ತಿರುವ ಎಲ್ಲರಿಗೂ ಬಾಲ್ಯದ ಅಜ್ಜಿಮನೆ ಬಹಳ ಕಾಡುವ ಸಂಗತಿ.

ಏಪ್ರಿಲ್ 10ರ ರಿಸಲ್ಟ್‌ಗೂ ಒಂದೆರಡು ದಿನ ಮೊದಲೇ ತನ್ನ ಮಗಳ ಮನೆಗೆ ಬಂದು ಇದ್ದು, ರಿಸಲ್ಟ್ ಪಡೆದ ದಿನದ ಸಂಜೆಯೇ ಮೊಮ್ಮಗ, ಮೊಮ್ಮಗಳನ್ನು ಕರೆದುಕೊಂಡು ಹೋಗುತ್ತಿದ್ದ ಅಜ್ಜನಿಂದಲೇ ಅಜ್ಜಿಮನೆಯ ಪಯಣ ಶುರುವಾಗುತ್ತಿತ್ತು. ಅಲ್ಲಿಂದ ಬರೋಬ್ಬರಿ ಎರಡು ತಿಂಗಳು ನಮ್ಮದೇ ಪ್ರಪಂಚ. ಆಗಿನ್ನೂ ಪಿಜ್ಜಾ, ಬರ್ಗರ್ ಕಾಲಿಟ್ಟಿರದ ಸುವರ್ಣಯುಗ. ಅಜ್ಜಿ ತನ್ನ ಮೊಮ್ಮಕ್ಕಳಿಗೆಂದು ಮಾಡಿಕೊಡುತ್ತಿದ್ದ ಮಾವಿನ ಹಣ್ಣಿನ ರಸಾಯನ ಮತ್ತು ದೋಸೆ, ಲಡ್ಡು, ಪಾಯಸ, ಗಿಣ್ಣು, ಚಕ್ಕುಲಿ, ತಂಬುಳಿ ಮುಂತಾದ ದೇಸಿ ತಿನಿಸುಗಳು ಎಳೆಯ ವಯಸ್ಸಿನಲ್ಲಿ ರುಚಿಕರವೂ, ಪೌಷ್ಟಿಕಾಂಶವೂ ಆಗಿರುತ್ತಿದ್ದವು. ಇಂದಿನ ಹಾಗೆ ಕಾಂಕ್ರೀಟ್ ಮನೆಗಳು ಅಷ್ಟಾಗಿ ಇರಲಿಲ್ಲ. ಸಾಮಾನ್ಯ ಹೆಂಚಿನ ಮನೆಗಳು, ಹುಲ್ಲಿನ ಹೊದಿಕೆಯಿರುವ ಮನೆಗಳಿರುತ್ತಿದ್ದವು. ಕೊಟ್ಟಿಗೆಯಲ್ಲಿ ಸದಾ ಜಾನುವಾರುಗಳ ಕೊರಳ ಗಂಟೆ ಸದ್ದು ತುಂಬಿರುತ್ತಿತ್ತು.

ದಿನಪೂರ್ತಿ ಸುತ್ತಮುತ್ತಲಿನ ಹುಡುಗರೊಂದಿಗೆ ಲಗೋರಿ, ಚಿನ್ನಿದಾಂಡು, ಕ್ರಿಕೆಟ್, ಮರಕೋತಿ ಆಟವಾಡುತ್ತಾ, ಹಸಿವಾದರೆ ಅಲ್ಲೇ ಇದ್ದ ಗೇರು ಹಣ್ಣು ತಿನ್ನುತ್ತಾ, ಮಾವಿನ ಮರಕ್ಕೆ ಕಲ್ಲೆಸೆದು ಮಾವಿನ ಕಾಯಿಗೆ ಉಪ್ಪು ಬೆರೆಸಿ ಚಪ್ಪರಿಸುತ್ತಾ, ಬಾಯಾರಿಸಿಕೊಳ್ಳಲು ಹೊಳೆ ಬದಿ ಸಾಗಿ ನೀರು ಕುಡಿದು ಅಲ್ಲೇ ಸ್ನಾನ ಮಾಡಿ ಅಜ್ಜಿ ಮನೆಗೆ ಸೇರುತ್ತಿದ್ದೆವು.

ಕೆಲವು ದಿನ ಗೆಳೆಯರೆಲ್ಲರೂ ಸೇರಿ ಬೆಟ್ಟದತ್ತ ಚಾರಣಕ್ಕೆ ಸಾಗುತ್ತಿದ್ದೆವು. ಮಲೆನಾಡಿನ ಸುಂದರ ಪ್ರಕೃತಿಯು ಬಾಲ್ಯದಲ್ಲಿ ಮನಸೂರೆಗೊಳ್ಳುತ್ತಿತ್ತು. ಕಾಡಿನತ್ತ ಸಾಗುವಾಗ ನವಿಲು ಗರಿಗಳನ್ನು ಕಲೆಹಾಕುತ್ತಾ, ವಿವಿಧ ಪಕ್ಷಿಗಳ ಇಂಪಾದ